

# ತೂರುಬಿಲ್ಲೆಯಾಟ ಮತ್ತು ಅಪ್ಪ

■ **ಟಿ.ಎಸ್. ಗೊರವರ,** ಕಥೆಗಾರ

ಲೋಕದಲ್ಲಿ ಎಲ್ಲರೂ ತಮ್ಮ ಪಾತ್ರಗಳನ್ನು ಪೂರೈಸುವಂತೆ ಅಪ್ಪನೂ ತನ್ನ ಪಾತ್ರ ಪೂರೈಸುತ್ತಿದ್ದಾನೆ. ಅವ್ವನಿಗೆ ಸಣ್ಣದೊಂದು ಸೆಡವು ಇರುವಂತೆ ಅಪ್ಪನೊಳಗೂ ಉರಿಯುವ ಸಿಟ್ಟಿದೆ. ಮನುಷ್ಯಸಹಜ ಸಣ್ಣತನಗಳು, ವೈಯಕ್ತಿಕ ಹಿತಾಸಕ್ತಿಯ ಮೇಲುಗೈ ಎಲ್ಲವೂ ಆತನೊಳಗೆ ಮೇಳೈಸಿವೆ. ಒಮ್ಮೊಮ್ಮೆ ಈ ಎಲ್ಲವನ್ನೂ ಹೇಳಿ ನಿರಾಳವಾಗಿಬಿಡಬೇಕು ಎಂದರೂ ಲೋಕದ ಕಟ್ಟಪ್ಪಣೆಗಳು ಹಾಗೆ ಸುಲಭವಾಗಿ ಹೇಳಲು ಬಿಡುವುದಿಲ್ಲ. ಸತ್ಯ ಯಾವಾಗಲೂ ಒಳಗೊಳಗೆ ನಿಗಿ ನಿಗಿ ಅನ್ನುತ್ತಿರುತ್ತದೆ. ಅದು ತುಟಿಯ ದಾಟಿ ಮಾತಾಗುವುದೆಂದರೆ ಕೆಂಡ ತುಳಿದಂತೆ. ಅಪ್ಪನನ್ನು ಚಿತ್ರವತ್ತಾಗಿ ಕಟ್ಟಿಕೊಡುವುದಾದರೆ ಅಲ್ಲಿ ನೆಳಲಿದೆ. ಉರಿವ ಬಿಸಿಲಿದೆ. ಹರಿವ ಕಣ್ಣೀರಿದೆ. ಆತ ಮಾಡಿದ ಗಾಯ ಮಾಯದೆ ಜೀವ ತಿನ್ನುತ್ತಿರುವಾಗಲೇ ಆತನದೇ ಬೆರಳುಗಳು ಮುಲಾಮು ಸವರಿದಂತೆನಿಸಿ ಅಳಬೇಕೋ ನಗಬೇಕೋ ತಿಳಿಯದೆ ದಿಕ್ಕುತಪ್ಪುತ್ತದೆ. ಬಾಲ್ಯವಷ್ಟೇ ಅಲ್ಲದೆ ಮೊನ್ನೆ ಮೊನ್ನೆವರೆಗೂ ಒಳಗೊಳಗೆ ಚಿಟಮುಳ್ಳು ಆಡಿಸಿದಂತೆ ನೀಗಲಾಗದ ನೋವಾಗಿದ್ದ ಅಪ್ಪ ಇತ್ತಿತ್ತಲಾಗಿ ಆ ನೋವು ಮರೆಯುವಂತೆ ಸಣ್ಣ ಹುಡುಗರ ಹಾಗೆ ಪ್ರೀತಿ ಸುರಿದು ನಂಬಲಾಗದಂತೆ ಮಾಡುತ್ತಿದ್ದಾನೆ. ಆತ ಲೋಕದಷ್ಟೇ ವಿಲಕ್ಷಣ.

ನಾನು ಏಳೋ ಎಂಟನೆಯ ತರಗತಿಯಲ್ಲಿರಬೇಕು. ಅಪ್ಪ ಆಗ ಗೌಡರ ಮನೆಯಲ್ಲಿ ಜೀತದಾಳು. ಅವ್ವ ಕೂಲಿಗೆ ಹೋಗುತ್ತಿದ್ದಳು. ನನಗೆ ಆ ದಿನಗಳಲ್ಲಿ 'ಚಿತ್ತಬಕ್ಕ' ಅಂದರೆ ತೂರುಬಿಲ್ಲೆಯಾಟ ಆಕರ್ಷಿಸಿತ್ತು. ನನ್ನ ವಾರಿಗೆಯವರು, ನನಗಿಂತ ದೊಡ್ಡವರು ನಾಕಾಣೆಯಲ್ಲೇ ಚಿತ್ತಬಕ್ಕವಾಡಿ ಎರಡು, ಐದು ರೂಪಾಯಿವರೆಗೂ ಗೆಲ್ಲುತ್ತಿದ್ದುದನ್ನು ಕಂಡ ನಾನು ಅಪ್ಪ ಜಳಕ ಮಾಡುವಾಗ ಗೂಟಕ್ಕೆ ಹಾಕುತ್ತಿದ್ದ ಬವಡಿ ಕಿಸೆಯಲ್ಲಿ ನಾಕಾಣೆ, ಎಂಟಾಣೆ ತುಡುಗು ಮಾಡಿ ಚಿತ್ತಬಕ್ಕ ಆಡಲು ಸುರು ಹಚ್ಚಿಕೊಂಡೆ. ಒಂದು ದಿನ ಪೇಣೆ ತೆಗೆದುಕೊಳ್ಳಲು ಕೊಟ್ಟ ಹತ್ತು ಪೈಸೆಯಲ್ಲಿ ಚಿತ್ತಬಕ್ಕ ಆಡಲು ಮಠದ ಎದುರಿಗೆ ಹುಡುಗರ ಗುಂಪಿನಲ್ಲಿ ನಾನೂ ಕುಳಿತೆ. ನಾನು ಇನ್ನೂ ಒಂದು ಕೈ ಕೂಡ ಆಡಿಲ್ಲ. ಯಾರೋ ಕೊರಳಪಟ್ಟಿ ಹಿಡಿದಂಗಾತು. ತಿರುಗಿ ನೋಡಿದರೆ ಅಪ್ಪ. ಕೈ ಕಾಲೆಲ್ಲ ನಡುಗತೊಡಗಿದವು. ತಡೆಹಿಡಿಯಲಾಗದೆ ಚೊಣ್ಣ ತೋಯ್ದು ಹೋಗಿತ್ತು. ಆತ ಸಿಟ್ಟಿನ ಕೈಯೊಳಗೆ ಬುದ್ಧಿ ಕೊಟ್ಟಿದ್ದ. ಚಪ್ಪಲಿ ಕಿತ್ತು ಹೊಡೆಯತೊಡಗಿದ.

> **ಆತ ಮಾಡಿದ ಗಾಯ ಮಾಯದೆ ಜೀವ ತಿನ್ನುತ್ತಿರುವಾಗಲೇ ಆತನದೇ ಬೆರಳುಗಳು ಮುಲಾಮು ಸವರಿದಂತೆನಿಸಿ ಅಳಬೇಕೋ ನಗಬೇಕೋ ತಿಳಿಯದೆ ದಿಕ್ಕುತಪ್ಪುತ್ತದೆ.**

ನಾನು ಕೊಸರಿಕೊಂಡು ಹಾಲಿನ ಕೇಂದ್ರದ ಸಂದಿ ಹಿಡಿದು ಒಂದಿಷ್ಟೂ ಖಬರಿಲ್ಲದೆ ಓಡತೊಡಗಿದೆ. ಅಪ್ಪನೂ ಹಿಂದೆ ಸಣ್ಣ ಹುಡುಗರಂತೆ ಬೆನ್ನು ಹತ್ತಿದ. ಜಾಲಿ ಪೊದೆಯಲ್ಲಿ ಓಡಿದೆ. ಅಲ್ಲೂ ಬೆನ್ನು ಹತ್ತಿದ. ನಾನು ಜೋರಾಗಿ ಅಳುತ್ತಾ ಬಾಯಿಗೆ ಬಂದ ದೇವರನ್ನು ಆತನಿಗೂ ಕೇಳಿಸುವಂತೆ ನೆನಸುತ್ತಾ ಓಡತೊಡಗಿದೆ. 'ರಾತ್ರಿ ಮನಿಗೆ ಬಾರಲೆ...' ಅಂದು ಅಷ್ಟಕ್ಕೆ ವಾಪಸ್ಸು ಹೋದ. ಓಡಿ ಓಡಿ ನನಗೆ ದಮ್ಮು ಹತ್ತಿತ್ತು. ಗಂಟಲೊಣಗಿ ನೀರಡಿಕೆಯಾಗಿತ್ತು. ಹೆದರಿಕೆಯಿಂದಾಗಿ ಮೈಯೆಲ್ಲಾ ಗದ ಗದ ನಡುಗತೊಡಗಿತ್ತು.

ಆ ದಿನ ರಾತ್ರಿವರೆಗೂ ಮನೆಗೆ ಹೋಗಿರಲಿಲ್ಲ. ಕನ್ನಡ ಸಾಲೆಯಲ್ಲಿ ಗೌಡಪ್ಪ ಕಾಕಾ, ಮತ್ತ್ಯಾರ‍್ಯಾರೋ ಆಡುತ್ತಿದ್ದ ವಾಲಿಬಾಲ್ ನೋಡುತ್ತ ಸಪ್ಪೆ ಮುಖ ಮಾಡಿಕೊಂಡು ಕುಳಿತಿದ್ದೆ. ನನ್ನ ಪುಣ್ಯ. ಸಂಜೆ ಮಳೆ ಹಚ್ಚಿ ನಿಂತು ಕಟಿಯತೊಡಗಿತು. ಎಲ್ಲರೂ ಸಾಲಿ ಗ್ರೌಂಡಿನಲ್ಲಿದ್ದ ಲೇಡಿಬಾಯಿಯವರ ಮನೆಯಲ್ಲಿ ಚಾಟಿಗೆಂದು ನಿಂತೆವು. ಮಳೆ ರಾತ್ರಿ ಒಂಬತ್ತಾದರೂ ನಿಲ್ಲುತ್ತಿಲ್ಲ. ನನಗೆ ಒಳಗೊಳಗೆ ಖುಷಿ. ರಾತ್ರಿಯೆಲ್ಲಾ ಮಳೆ ಹೀಗೇ ಸುರಿದರೆ ಇವತ್ತೊಂದು ರಾತ್ರಿ ಇಲ್ಲೇ ಲೇಡಿಬಾಯಿಯವರ ಮನೆಯಲ್ಲಿ ಕಳೆದುಬಿಡಬಹುದು ಅಂತ.

ಮಳೆ ಒಂದಿಷ್ಟು ವರಪಾಗಿತ್ತು. ಲೇಡಿಬಾಯಿಯವರ ಮನೆಯಿಂದ ಎಲ್ಲರೂ ಹೊರಬಂದೆವು. ಗೌಡಪ್ಪ ಕಾಕಾ ನನ್ನನ್ನು ಮನೆಗೆ ಕಳಿಸಲು ಬಂದ. ಮನೆ ಸಮೀಪಿಸಿದಾಗ ಮತ್ತೆ ಹೆದರಿಕೆ ಸುರುವಾತು. ಗಾಳಿಗೆ ಹಿತ್ತಲ ತಟ್ಟಿ ಬಿದ್ದು ಹೋಗಿರುವುದನ್ನು ಅಪ್ಪ, ಅವ್ವ ಸರಿಪಡಿಸತೊಡಗಿದ್ದರು. ಗೌಡಪ್ಪ ಕಾಕಾ ನನ್ನನ್ನು ಬಿಟ್ಟು ತನ್ನ ಪಾಡಿಗೆ ತಾನು ಸುಮ್ಮನೆ ತಮ್ಮ ಮನೆ ಕಡೆ ಹೋದ. ಅವ್ವ ಒಂದಿಷ್ಟು ಸಾಪಳಿಸಿದಳು. ನಾನು ತಲೆ ತಗ್ಗಿಸಿಕೊಂಡು ಮಳೆಗೆ ಒದ್ದೆಯಾಗಿದ್ದ ನೆಲದ ಮ್ಯಾಲೆ ಹೆಬ್ಬೆರಳು ಆಡಿಸುತ್ತಾ ನಿಂತೆ. ಅಪ್ಪ, ಅವ್ವನನ್ನು ಕರೆದು ಹಗ್ಗ ತರಲು ಹೇಳಿದ. ನಾನು ಎಷ್ಟು ಕೊಸರಿದರೂ ಆತ ಬಿಡದೇ ಕೈ ಹಿಡಿದು ಎಳೆದುಕೊಂಡು ಹೋಗಿ ಮನೆ ಮುಂದೆ ಆಕಳು ಕಟ್ಟುತ್ತಿದ್ದ ನೀಲಗಿರಿ ಗಿಡಕ್ಕೆ ನನ್ನನ್ನು ಕಟ್ಟಿ ಮೈ ತುಂಬಾ ಹಗ್ಗವನ್ನು ಹಾವು ಸುತ್ತಿದಂತೆ ಸುತ್ತಿದ. ಗಿಡಕ್ಕೆ ಕಟ್ಟಿ ಸುಮ್ಮನೆ ಬಿಡಲಿಲ್ಲ. ದಂಟಿನಿಂದ ಮೈಗೆ ಒಂದೆರಡು ಬಾರಿಸಿದ. ಹೊಡ್ತದ ನೋವು ತಾಳದೆ ಲಬ ಲಬ ಹೊಯ್ಕೊಂಡೆ. ಅಕ್ಕಪಕ್ಕದ ಮನೆಯವರು ಬಂದು ಹೇಳಿದರೂ ಬಿಡಲಿಲ್ಲ. ತಾಸೊತ್ತು ಹೀಗೆ ಗಿಡಕ್ಕೆ ಕಟ್ಟಿದ್ದ. ಜೋರು ಗಾಳಿಗೆ ನೀಲಗಿರಿ ಗಿಡ ಅಲುಗಾಡುತ್ತಿತ್ತು. ಹೆದರಿಕೆಯಾಗೋದು. ಸಣ್ಣಗೆ ಹನಿ ಹನಿ ಉದುರತೊಡಗಿತ್ತು. ಮಳೆಯಿಂದಾಗಿ ಗಾಳಿ ತಣ್ಣಗಿತ್ತು. ಅದು ಮೈ ತುಂಬಾ ಹೊಕ್ಕಂಗಾಗಿ ಥಂಡಿ ಹಿಡಿದು ಮೈಯೆಲ್ಲಾ ಗದ ಗದ ನಡುಗತೊಡಗಿತ್ತು. ಏಟೇಟೂ ಬೆಳಕಿಲ್ಲ. ಗವ್ವನೆ ಕತ್ತಲು ಸುರಿಯತೊಡಗಿತ್ತು. ಮಿಂಚಿದಾಗಷ್ಟೇ ಬೆಳಕಿನ ಸೆಳಕು ಬೀಳುತ್ತಿತ್ತು. ಹಸಿವು, ಅವಮಾನ ಎಲ್ಲ ಒಂದಾಗಿ ನನ್ನನ್ನು ಹಿಂಡಿ ಹಿಪ್ಪಿ ಮಾಡತೊಡಗಿದ್ದವು. ಅಪ್ಪ ಮಲಗಿರಬೇಕು. ಅವ್ವ ಬಂದು ಬಯ್ದಾಡುತ್ತಾ ಹಗ್ಗ ಬಿಚ್ಚಿದಳು. ನಾನು ಅಂಗಿ ಚೊಣ್ಣ ಬದಲಾಯಿಸಿಕೊಂಡು ಅವ್ವ ನೀಡಿ ಕೊಟ್ಟ ಸಂಗಟಿ, ಮಜ್ಜಿಗೆ ಸಾರು ಉಂಡೆ. ಅಲ್ಲೇ ಮನೆಯೊಳಗೆ ಗೂಟಕ್ಕೆ ಕಟ್ಟಿದ ಬೋಳ ಆಡಿನ ಹತ್ತಿರ ಮಲ್ಕೊಂಡೆ.

ಈ ನೆನಪು ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಮೊನ್ನೆ ಬೇಕಂತಲೇ ಮೋಜಿಗೆಂದು ಮನೆಯೊಳಗೆ ಸಣ್ಣ ಹುಡುಗರೊಂದಿಗೆ ತೂರುಬಿಲ್ಲೆಯಾಟ ಆಡತೊಡಗಿದ್ದೆ. ಯಾರದೋ ಹೊಲಕ್ಕೆ ಕೂಲಿ ಕೆಲಸಕ್ಕೆ ಹೋಗಿದ್ದ ಅಪ್ಪ ಬಂದ. ತೂರುಬಿಲ್ಲೆಯಾಟ ನೋಡಿ 'ಚಿತ್ತಬಕ್ಕ ಆಡೋಕೆ ಸಣ್ಣ ಹುಡುಗ ಆಗಿಯೇನಪಾ...' ಅನ್ನುತ್ತ ತುಟಿಯಲ್ಲಿ ನಗು ಅರಳಿಸಿದ. ನಾನು ಕೇಳಿಸಿಯೂ ಕೇಳದಂತೆ ಆಟ ಮುಂದುವರೆಸಿದೆ. ಆಗ ಸೇಡು ತೀರಿಸಿಕೊಂಡ ಖುಷಿ ನನ್ನನ್ನು ಆವರಿಸಿತು. ■

